

ನಿವೃತ್ತಿಯಾಗಿದ್ದ ಮೇಷ್ಟ್ರು ಮಕ್ಕಳನ್ನೂ ಹೊಡೆಯದ ತಣ್ಣಗಿನ ಸ್ವಭಾವದವರು. ಇನ್ನು ಸತ್ತಮೇಲೂ ಎದ್ದು ಬಂದ ಮಹಿಷಾಸುರನಂತಿರುವ ಈ ಋತುರಾಜನಿಗೆ ಏನು ತಾನೇ ಮಾಡಿಯಾರು? ಊರಿನ ಗಣ್ಯರಿಗೆ ಹೇಳಿ ನೋಡಿದರು. ಅವರ ಪೈಕಿ ಕೆಲವರು ಬಂದು ಕಿವಿಮಾತು ಹೇಳಿದರು. ಆದರೆ ಪಿಷ್ಕಿಂಟ್ರ ಋತುರಾಜ ಇವಕ್ಕೆಲ್ಲ ಮೊದಲೇ ತಯಾರಾಗಿದ್ದ. 'ನೀವು ಅಧ್ಯಕ್ಷರಾಗಿದ್ದು ಗ್ರಾಮ್ ಪಂಚಾಯ್ತಿಗೆ. ನಮ್ಮನಿಗಲ್ಲ ಅಕ? ನನ್ ರೋಡಲ್ಲಿ ನಾ ಎಂಥ ಬೇಕಾರೂ ಮಾಡ್ತೆ. ಯಾವನಾರೂ ಕೇಳೂಕ್ ಬಂದ್ರೆ ಸೊಡ್ಡು ಹುಡಿ ಮಾಡ್ತೆ' ಎಂದು ಅಬ್ಬರಿಸಿದ್ದ. ಹೀಗೆ ದೊಡ್ಡ ದನಿಯಲ್ಲಿ ಬೊಬ್ಬಿರಿಯುವುದು ಎಂಥದೇ ಸತ್ಯದ ವಾದವನ್ನಾದರೂ ಮಣ್ಣು ಮುಕ್ಕಿಸಬಲ್ಲ ಬ್ರಹ್ಮಾಸ್ತ್ರವೆಂಬುದು ಅವನಿಗೆ ಅಮ್ಮನಿಂದ ಗೊತ್ತಾಗಿದ್ದ ಸತ್ಯ.